ಕರ್ನಾಟಕ ಸರ್ಕಾರ

(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ:Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು-09.
ದಿನಾಂಕ:04-03-2014.

ಸುತ್ತೋಲೆ- 2

ಗಣಕೀಕರಣ ಯೋಜನೆ ಅನುಷ್ಠಾನ ಹಾಗೂ ಕಾರ್ಯಾಚರಣೆಯಲ್ಲಿ ಹಲವಾರು ಸಮಸ್ಯೆಗಳು ಉದ್ಭವಿಸುತ್ತಿರುವುದು ಹಾಗೂ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಲವಾರು ವಿಧಾನಗಳನ್ನು ಅಧಿಕಾರಿಗಳು ಅಳವಡಿಸಿಕೊಳ್ಳುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ಸಮಸ್ಯೆಗಳು ಯಾವ ಹಂತದಲ್ಲಿ ಇದೆ, ಇವುಗಳ ವಿಲೇವಾರಿ, ಸಮಸ್ಯೆ ವಿಲೇವಾರಿಗೆ ತೆಗೆದುಕೊಂಡು ಸಮಯಗಳ ಬಗ್ಗೆ ಮಾಹಿತಿ ಈ ಕಛೇರಿಯಲ್ಲಿ ಇರುವುದಿಲ್ಲ. ಇದರಿಂದಾಗಿ ಇಲಾಖೆ ಹಲವಾರು ಬಾರಿ ಮುಜುಗರಕ್ಕೆ ಒಳಪಡುವ ಸಂದರ್ಭಗಳು ಉಂಟಾಗಿದೆ. ಆದ ಕಾರಣ ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಒಂದು ಸಾಮಾನ್ಯ ವಿಧಾನ ಅಳವಡಿಸುವ ಅವಶ್ಯಕತೆ ಇರುತ್ತದೆ. ಈ ನಿಟ್ಟಿನಲ್ಲಿ Service Deskಅನ್ನು ಕೇಂದ್ರ ಕಛೇರಿಯಲ್ಲಿ ತೆರೆಯಲಾಗಿದೆ. ಈ Service Deskಗೆ ಈ ಕೆಳಕಂಡ ನಾಲ್ಕು ದೂರವಾಣಿಗಳನ್ನು ನೀಡಲಾಗಿದೆ.

080- 22220951, 080-22220939, 080- 22220953, 080- 22220979

ನಿಮ್ಮ ಕಛೇರಿಯಲ್ಲಿ ಗಣಕೀಕರಣಕ್ಕೆ ಸಂಬಂದಿಸಿದಂತೆ ಯಾವುದೇ ತೊಂದರೆ ಉಂಟಾದಲ್ಲಿ ಕಛೇರಿ ಮುಖ್ಯಸ್ಥರು ಕೂಡಲೆ Service Deskಗೆ ಕರೆ ಮಾಡಿ, ಸಮಸ್ಯೆಯನ್ನು ತಿಳಿಸಿ, Service Desk executive ನಿಂದ Ticket number ಹಾಗೂ ಸಮಸ್ಯೆ ಬಗೆಹರಿಸಲು ಬೇಕಾಗುವ ಸಮಯವನ್ನು ತೆಗೆದುಕೊಳ್ಳುವುದು. ದೂರು ನೀಡಿದ ನಿಮಿಷದೊಳಗೆ ನಿಮಗೆ ನಿಮ್ಮ ಹಾರ್ಡವೇರ್ ಎಕ್ಸಿಕ್ಯೂಟೀವ್ ರವರಿಗೆ , ಸಂಬಂಧಪಟ್ಟ ಕೇಂದ್ರಸ್ಥಾನ ಸಹಾಯಕರಿಗೆ ಹಾಗೂ ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿರವರ ದೂರವಾಣಿಗೆ ಎಸ್‌ಎಂಎಸ್ ಮೂಲಕ ಸಂದೇಶ ರವಾನೆಯಾಗುತ್ತದೆ ಹಾಗೂ ಅವರ ಇ-ಮೇಲ್ ಖಾತೆಗೆ ಇ-ಮೇಲ್ ಸಂದೇಶ ರವಾನೆಯಾಗುತ್ತದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಸಮಸ್ಯೆ ಬಗೆಹರಿಯದಿದ್ದಲ್ಲಿ ಈ ಕೆಳಕಂಡ Escalation matrix ಉಪಯೋಗಿಸಿ ಮೇಲಾಧಿಕಾರಿಗಳಿಗೆ ಇ-ಮೇಲ್ ಮೂಲಕ ದೂರು ನೀಡಲು ಸೂಚಿಸಿದೆ.

| | |
|---|---|
| Service Desk | sd1.igro@karnataka.gov.in<br>sd2.igro@karnataka.gov.in |
| ↓ | |
| Program Manager/ | pm.kaveri@karnataka.gov.in |
| Project Manager (O&M) | pm.om@karnataka.gov.in |
| ↓ | |
| AIGR (Comp) | pm.kaveri@karnataka.gov.in |
| ↓ | |
| IGR | igr@karnataka.gov.in |

ಮೇಲ್ಕಂಡ ವಿಧಾನವನ್ನು ಎಲ್ಲಾ ಅಧಿಕಾರಿಗಳು ಅಳವಡಿಸಿಕೊಳ್ಳತಕ್ಕದ್ದು. ಈ ವಿಧಾನವಲ್ಲದೆ ಬೇರೆ ಯಾವುದೇ ವಿಧಾನವನ್ನು ಅನುಸರಿಸಿದ್ದಲ್ಲಿ, ಇಲಾಖೆ ಅದಕ್ಕೆ ಜವಬ್ದಾರಿ ತೆಗೆದುಕೊಳ್ಳುವುದಿಲ್ಲ ಹಾಗೂ ಅಂತಹ ವೇಳೆ ಸಂಭವಿಸುವ ಅನಾಹುತಗಳಿಗೆ ನೇರವಾಗಿ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರನ್ನು ಗುರಿ ಮಾಡಲಾಗುವುದು.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಪ್ರತಿ:**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪ-ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.